# ಶುದ್ಧ ಮನರಂಜನೆ ಗಂಭೀರ ಚಿಂತನೆ

ಕಳೆದ ಮೂರು ದಿನಗಳಲ್ಲಿ 'ಸುಧಾ' ಯುಗಾದಿ ವಿಶೇಷಾಂಕವನ್ನು ಓದಿ ಸಂತೋಷಪಟ್ಟಿದ್ದೇನೆ. ಕೊರೊನಾ ಕಾಲಘಟ್ಟಕ್ಕೆ ಪ್ರಸ್ತುತವಾಗುವಂತೆ, ಹೊಸ ರೀತಿಯಲ್ಲಿ, ಹೊಸ ಅಂಕಣಗಳೊಡನೆ, ಅದನ್ನು ನೀವು ಯೋಜಿಸಿದ್ದೀರಿ. 'ಕೊರೊನಾ ಕಥೆಗಳು' ತುಂಬಾ ಚೆನ್ನಾಗಿವೆ; ಕೊರೊನಾ ಕಾಲದ ಕ್ರೌರ್ಯ ಹಾಗೂ ಮಾನವೀಯತೆಯನ್ನು ಅವುಗಳು ಮನದಟ್ಟು ಮಾಡುತ್ತವೆ.

'ಸೆಲೆಬ್ರಿಟಿ ಸಣ್ಣ ಕಥೆಗಳು' ಸಾಲಿನಲ್ಲಿ ಹೆಚ್ಚಿನವು ಯಶಸ್ವಿಯಾಗಿವೆ; ನನಗೆ ತುಂಬಾ ಇಷ್ಟವಾದುದೆಂದರೆ ಪವನ್ ಒಡೆಯರ್ ಅವರ 'ಕರ್ಮ' ಎಂಬ ಕಥೆ; ಇದು ಅನೇಕ ಭಿನ್ನ ಧ್ವನಿಗಳನ್ನು ಹೊಂದಿದೆ. ಪ್ರಬಂಧಗಳಲ್ಲಿ 'ಲೋಕಲ್ ಲಾರಿ ಉಪ್ಪಾಪ' ಎಂಬ ಪ್ರಬಂಧಕ್ಕೆ ಪ್ರಥಮ ಬಹುಮಾನ ಬಂದಿರುವುದು ಉಚಿತವಾಗಿದೆ; ಪ್ರಬಂಧವು ವ್ಯಕ್ತಿಯೊಬ್ಬನನ್ನು, ಅವನ ಮೂಲಕ ಒಂದು ಕಾಲಘಟ್ಟವನ್ನು ಆಪ್ತವಾಗಿ ಕಟ್ಟಿಕೊಡುತ್ತದೆ.

'ಮಹಾತ್ಮ ಪಿಕ್ಚರ್ಸ್'ನ ಶಂಕರ್ ಸಿಂಗ್ ಅವರನ್ನು ಕುರಿತ ಲೇಖನವಂತೂ ತುಂಬಾ ಆಪ್ತವಾಗಿ, ಹೃದಯಸ್ಪರ್ಶಿಯಾಗಿ, ಅವರ ಸೋಲು–ಗೆಲುವುಗಳನ್ನು, ಕನ್ನಡ ಚಿತ್ರರಂಗಕ್ಕೆ ಭದ್ರ ತಳಹದಿಯನ್ನು ಅವರು ಕಟ್ಟಿಕೊಟ್ಟುದನ್ನು ದಾಖಲಿಸುತ್ತದೆ. ಓದುತ್ತಾ ಹೋದಂತೆ, ನಾನು ನನಗೆ ಗೊತ್ತಿಲ್ಲದಂತೆಯೇ ಬಹು ಹಿಂದಕ್ಕೆ ಹೋಗಿ, ಶೂಟಿಂಗ್ ನೋಡಲು ನವಜ್ಯೋತಿ ಸ್ಟುಡಿಯೊಗೆ ಹೋಗಿದ್ದು, ಆ ಸ್ಟುಡಿಯೊದಲ್ಲಿ ನಿರ್ಮಾಣವಾದ 'ಜಗನ್ಮೋಹಿನಿ' ಚಿತ್ರವನ್ನು ಮೈಸೂರಿನ ರಾಜ್‌ಕಮಲ್ ಚಿತ್ರಮಂದಿರದಲ್ಲಿ, ನಾಲ್ಕಾಣೆ ಸೀಟಿನ ಸಾಲಿನಲ್ಲಿ ಕುಳಿತು ಮೂರು ಬಾರಿ ನೋಡಿ ಆನಂದಿಸಿದುದು, ಅದರಲ್ಲಿ, ಕನ್ನಡ ಹಾಡುಗಳಿಗೆ ಹಿಂದಿ ಚಿತ್ರದ ಹಾಡುಗಳ ಟ್ಯೂನ್ ಅಳವಡಿಸಿಕೊಂಡಿರುವುದು ('ಎಂದೋ ಎಂದೋ, ಎಂದೋ ನಿನ್ನ ದರುಶನವು' – 'ಆಯೆಗಾ ಆಯೆಗಾ' ಹಾಡಿನ ಟ್ಯೂನ್) ತಪ್ಪಲ್ಲ ಎಂದು ಸ್ನೇಹಿತರೊಡನೆ ವಾದಿಸಿದುದು, ಇವೆಲ್ಲವೂ ನೆನಪಿಗೆ ಬಂದುವು.

'ಫಲ ಕರ್ನಾಟಕ,' 'ಕರುನಾಡಿನ ಗಂಗೆತುಂಗೆ', ಇತ್ಯಾದಿ ಸಚಿತ್ರ ಲೇಖನಗಳು ಹೊಸ ಮಾದರಿಯ ಲೇಖನಗಳು. ಒಟ್ಟಿನಲ್ಲಿ, ಕುತೂಹಲಕರ ಮಾಹಿತಿ, ಶುದ್ಧ ಮನರಂಜನೆ ಹಾಗೂ ಗಂಭೀರ ಚಿಂತನೆ ಇವುಗಳನ್ನು ಓದುಗರಿಗೆ ಕೊಡುವ ವಿಶೇಷಾಂಕವನ್ನು ರೂಪಿಸಿರುವ 'ಸುಧಾ' ಬಳಗಕ್ಕೆ ಹಾರ್ದಿಕ ಅಭಿನಂದನೆಗಳು.

**–ಸಿ.ಎನ್. ರಾಮಚಂದ್ರನ್**
ಹಿರಿಯ ವಿಮರ್ಶಕ




## ಸಹೃದಯರ ಸ್ಪಂದನ

# ಬೇರು, ಚಿಗುರಿನ ಮೌನ ಮಾತುಕತೆ

ಪ್ಲವ ಸಂವತ್ಸರದ 'ಸುಧಾ' ಯುಗಾದಿ ವಿಶೇಷಾಂಕವನ್ನು ಓದಿ ಪಟ್ಟ ಸಂತೋಷಕ್ಕಾಗಿ ಈ ಪತ್ರ. ಈ ವರ್ಷದ ಸಂಚಿಕೆ ನಾಡಿನ ಸಾಂಸ್ಕೃತಿಕ ಬಜೆಟ್‌ನ್ನು ಮಂಡಿಸಿದವರ ಗ್ರೂಪ್ ಫೋಟೊದಂತಿದೆ. ಕಳೆದ, ಅಳಿದ ಮತ್ತು ಉಳಿದ ಆಯವ್ಯಯದ ಲೆಕ್ಕಾಚಾರವನ್ನೂ ಭವಿಷ್ಯದ ಪ್ರವಾದಿ ಆಶಯವನ್ನೂ ತೋರಿಸಲು ಸಿದ್ಧವಾದ ಕಾಲ ಪುರುಷನ ಚೌಕಿ ಮನೆಯ ಚೌಕಟ್ಟನ್ನು ಇಣುಕಿ ನೋಡಲಾಗಿದೆ. ಈ ಅಕ್ಷರ ವೇಷವನ್ನು ಓದುಗರು ತಮ್ಮ ಮನೋರಂಗದಲ್ಲಿ ಬರಮಾಡಿಕೊಂಡಿದ್ದಾರೆ.

ಯುಗಾದಿ ಇತರೆ ಹಬ್ಬಗಳಿಗಿಂತ ಭಿನ್ನ; ದೇವರ ಸ್ತುತಿ, ಪೂಜೆ, ಆರಾಧನೆ ಇಲ್ಲದ, ಕಾಲ ಮತ್ತು ಪ್ರಕೃತಿಯ ಪರಿವರ್ತನೆಯನ್ನು ಕಥಿಸುವ ಹಬ್ಬ; ಸ್ವಲ್ಪ ದೂರ ನಡೆದು ತಿರುವಿನಲ್ಲಿ ಕ್ಷಣ ನಿಂತು ಹಿಂದೆಮುಂದೆ ನೋಡಿ ಸಾಗುವ ದಾರಿ. ಎಂದಿನಂತೆ ಈಗಲೂ ವರ್ಷದ ಹೊಸ ಪಂಚಾಂಗ, ಬೇಂದ್ರೆಯವರ ಪದ್ಯ ಮತ್ತು 'ಪ್ರಜಾವಾಣಿ' ಪರಿವಾರದ 'ಸುಧಾ' ಪತ್ರಿಕೆ ನನ್ನ ಪಯಣದ ಪಲ್ಲಟಗಳ ಪುಟವನ್ನು ತೆರೆದು ಯುಗಾದಿಯ ದರ್ಶನ ಮಾಡಿಸಿವೆ. ಯುಗಾದಿಯನ್ನು ಕಾಲ ಪುರುಷನ ವೇಷದಲ್ಲಿ, ಕಾವ್ಯದ ಸೊಗಡಿನಲ್ಲಿ, ಸಂಸ್ಕೃತಿಗಳ ಪರಿಭಾಷೆಯಲ್ಲಿ ಅರ್ಥೈಸಿಕೊಟ್ಟ ಈ ಮೂರು ಚಿತ್ರಗಳು ನನ್ನ ನೆನಪಿನ ಅಲ್ಬಂನಲ್ಲಿವೆ.

ಬೇರು ಮತ್ತು ಚಿಗುರುಗಳ ನಡುವಿನ ಮೌನ ಮಾತುಕತೆ ಸಂಚಿಕೆಯ ವಿನ್ಯಾಸವನ್ನು ರೂಪಿಸಿದೆ. 'ಸುಧಾ'ದ ಮಟ್ಟಿಗೆ ಹೊಸ ಬರಹಗಾರರನ್ನು ಉತ್ಸಾಹದಲ್ಲಿ ಮುನ್ನಡೆಸಿದ ಹಾದಿ ಈ ಯುಗಾದಿ; ಹಿರಿಯರ ಜೊತೆಗೆ ಹೆಜ್ಜೆ ಹಾಕುತ್ತ ಕುಟುಂಬದ ಹೊಸ ತಲೆಮಾರು ಸಾಹಿತ್ಯ ಪರಂಪರೆಯ ಹೊಣೆಗಾರಿಕೆಗೆ ಹೆಗಲು ಕೊಡುವ ಮುಹೂರ್ತವನ್ನು ನಿಕ್ಕಿ ಮಾಡಿದೆ; ಓದುಗ ಮತ್ತು ಬರಹಗಾರರ ನಡುವಿನ ಅಂತಃಪಟವನ್ನು ಸರಿಸುವ ಕೆಲಸ ಸಂಚಿಕೆಯದು; 'ಕಥಾ ಚೈತ್ರ' ಮತ್ತು 'ಕಾವ್ಯ ವಸಂತ'ದ ಋತುಮಾನ ನನ್ನ ಮಾತಿಗೆ ಋಜು ಹಾಕಿದೆ; 'ಪಿರಾಮಿಡ್ ಕಥನ' ಮತ್ತು 'ಮರುಭೂಮಿ ಕಾವ್ಯ' ರೂಪಕಗಳು ಸಾಕ್ಷಿಗಳಾಗಿವೆ.

ಮೊದಲಿನಿಂದಲೂ 'ಪ್ರಜಾವಾಣಿ' ಪರಿವಾರ ಲೇಖಕರಿಗೆ ಬರೆಯಲು ಒಂದಿಷ್ಟು ಅವಕಾಶದ ಆಕಾಶ ಮತ್ತು ಪ್ರಕಟಿಸಲು ಬೇಕಿರುವಷ್ಟು ಸೂರ್ಯ ಪ್ರಕಾಶವನ್ನು ಒದಗಿಸಿದಷ್ಟೇ ಅಲ್ಲ; ಪ್ರತಿಭಾವಂತರನ್ನು ಹುಡುಕಿ ಬರೆಯಿಸಿಕೊಂಡಿದೆ. ಸೆಲೆಬ್ರಿಟಿಯವರಿಂದ ಬರೆಯಿಸಿಕೊಂಡ ಸಣ್ಣಕಥೆಗಳು ಇದಕ್ಕೆ ಉದಾಹರಣೆ. ಬದಲಾಗುತ್ತಲೇ ಇರುವ ಓದುಗರ ಅಪೇಕ್ಷೆಯನ್ನ ಸದಭಿರುಚಿಯ ದಿಕ್ಕಿನಲ್ಲಿ ನಡೆಸಲು ಅಗತ್ಯವಾದ ಸಾಹಿತ್ಯ ಪಠ್ಯದ ಸಿಲೆಬಸ್ ಅನ್ನು ನಿರಂತರವಾಗಿ ಪ್ರಸ್ತುತಗೊಳಿಸುತ್ತಲೇ ಇರಬೇಕಾದ ಕಾಳಜಿಯನ್ನು ಪತ್ರಿಕೆ ಮರೆತಿಲ್ಲ; ಚೆಂದದ ಹಳೆಯ ಮನೆಯಲ್ಲಿ ಮುಸ್ಸಂಜೆ ಹೊತ್ತಿಗೆ ಹಚ್ಚಿಡುವ ಹೊಸ ಪರಿಮಳದ ಹಿತವಾದ ಲೋಬಾನದಂತೆ. ಹಳಬರು, ಹೊಸಬರು ಖಾಲಿಯಾಗದ, ತಲೆಮಾರುಗಳ ಅಂತರದ ಕಂದಕ ಬೀಳದ ಅವಿಭಕ್ತ ಕುಟುಂಬದ ಪರಂಪರೆಯ ಅಂತಃಸತ್ವವನ್ನು ಸುಪ್ತವಾಗಿ ಪಡೆದ ಮನೆಯಂತೆ. ಸಾಹಿತ್ಯದ ವಿಶಿಷ್ಟ ಪ್ರಕಾರವಾದ ಪ್ರಬಂಧ ಬರಹದ ಭೂಮಿಗೆ ಮಳೆ ಸುರಿಸಿ ಹುಲುಸಾದ ಫಸಲಿಗೆ ಕಾರಣವಾದ ಪತ್ರಿಕೆ, ಪತ್ರಿಕಾ ವರದಿಯ ಶಿಸ್ತನ್ನು ಪಡೆಯುತ್ತ ಪ್ರಬಂಧ ರಚನೆಯ ಮೂಲಕ ಕಥನ ಕಲೆಯ ಮಿಡಿತವನ್ನು ಅರಿಯುವವರಿಗೆ ದಾಟುಸಂಕ ಹಾಕುವ ಪರಿಪಾಠವನ್ನು ರೂಢಿಸಿಕೊಂಡಿದೆ. ಇದು ಪರೋಕ್ಷವಾಗಿ ಹೊಸಬರಲ್ಲಿ ಸೃಜನಶೀಲ ಬರವಣಿಗೆಯನ್ನು ಜಾಗೃತಗೊಳಿಸುವ ಪ್ರಾಯೋಗಿಕ ಕಮ್ಮಟವೆಂದೇ ನಾನು ಭಾವಿಸಿರುವೆ.

'ಬಹುತ್ವಬಲ ಕರ್ನಾಟಕಫಲ' ಶೀರ್ಷಿಕೆಯ ಅಡಿಯಲ್ಲಿ ನಾಡಿನ ಸಾಂಸ್ಕೃತಿ ವೈವಿಧ್ಯವನ್ನು ಪರಿಚಯಸುವ ವಿಶಿಷ್ಟ ಯತ್ನವಿದೆ. ಬೇರೆ ಬೇರೆ ಪ್ರದೇಶಗಳಲ್ಲಿ ಬೆಳೆಯುವ ರಸರುಚಿಯ ಹಣ್ಣುಗಳು ನಾಡಿನ ಸಾಂಸ್ಕೃತಿಕ ಭಿನ್ನತೆಯನ್ನು ಬಿಂಬಿಸುವ ಪರಿಯನ್ನು ಮೂರ್ತಗೊಳಿಸಿದ ರೀತಿಯೇ ಮೋಹಕವಾಗಿದೆ. ಭಿನ್ನತೆಯ ಬದಿಯಲ್ಲೇ ಏಕತೆಯ ಪ್ರತಿನಿಧಿಯಾಗಿ ಹರಿಯುತ್ತಿರುವ ಜೀವನದಿ ತುಂಗೆಯ ಒಡಲ ಕಥೆವ್ಯಥೆಯ ನಿರೂಪಣೆಯಿದೆ.

ಸಿನೆಮಾ ಕೇವಲ 'ಚಿತ್ರಹಿಂಸೆ'ಯ ಮಾಧ್ಯಮವಾಗುತ್ತ ತನ್ನ ಸಾಂಸ್ಕೃತಿಕ ಕಾಳಜಿಯನ್ನು ಕಳಚಿಕೊಳ್ಳುತ್ತ ಸಾಗುತ್ತಿರುವ ಬಿಕ್ಕಟ್ಟಿನ ಕಾಲದಲ್ಲಿ ಚಿತ್ರಪ್ರಪಂಚದ ಎರಡು ಹಿರಿಯ ಜೀವಗಳ ಅನುಭವ ಕಥನಗಳನ್ನು ನಿರೂಪಿಸಿದ 'ಚಂದನವನದ ಕಲ್ಪವೃಕ್ಷ' ಮತ್ತು 'ತೊಂಬತ್ತೊಂದರ ತರುಣ' ಲೇಖನಗಳು ಜನಮಾನಸದಲ್ಲಿ ಹಾಸುಹೊಕ್ಕಿರುವ ಸಿನೆಮಾಗಳ ಇತಿಹಾಸವನ್ನು ಕಟ್ಟಿಕೊಟ್ಟಿವೆ. ಸಿನೆಮಾದ ಉದ್ವೇಗ ಮತ್ತು ಉದ್ರೇಕವನ್ನು ಪ್ರತಿರೋಧಿಸುವ ರೋಗನಿರೋಧಕ ಗುಣ ಈ ಬರಹಗಳಿಗಿವೆ. ಓದುಗರ ಅನುಭವ ಮಂಟಪದಲ್ಲಿ ಎಲ್ಲರ ಮಾತಿಗೂ ಅವಕಾಶ ಒದಗಿದೆ. ಸಂಚಿಕೆಯ ಬಣ್ಣಗಳು, ಚಿತ್ರಗಳು, ಉಪಶೀರ್ಷಿಕೆಗಳು ಅರ್ಥಪೂರ್ಣವಾಗಿವೆ. 'ಸುಧಾ' ಬಳಗಕ್ಕೆ ಅಭಿನಂದನೆಗಳು.

**–ಶ್ರೀಧರ ಬಳಗಾರ,** ಹಿರಿಯ ಕಥೆಗಾರ

**'ಸುಧಾ' ಯುಗಾದಿ ವಿಶೇಷಾಂಕ ಇದೀಗ ಮಾರುಕಟ್ಟೆಯಲ್ಲಿದೆ. ಓದಿ, ಓದಿಸಿ...**